## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಕರ್ನಾಟಕ ಮರಾಠ ಅಭಿವೃದ್ಧಿ ನಿಗಮದಿಂದ ಅನುಷ್ಠಾನಗೊಳಿಸುವ ಅರಿವು ಶೈಕ್ಷಣಿಕ ಸಾಲ ಯೋಜನೆ ಫಲಾನುಭವಿಗಳ ಆಯ್ಕೆ ಸಮಿತಿಯನ್ನು ರಚಿಸುವ ಬಗ್ಗೆ ಮತ್ತು ಮಾರ್ಗಸೂಚಿಗಳನ್ನು ರೂಪಿಸುವ ಬಗ್ಗೆ.

**ಓದಲಾಗಿದೆ:-** ಸರ್ಕಾರದ ಆದೇಶ ಸಂಖ್ಯೆ:ಹಿಂವಕ 507 ಬಿಎಂಎಸ್ 2013, ದಿನಾಂಕ:31.08.2013.
ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಮರಾಠ ಅಭಿವೃದ್ಧಿ ನಿಗಮ ಇವರ ಪ್ರಸ್ತಾವನೆ ಸಂಖ್ಯೆ: ಕಮಸಅನಿನಿ/ಸಿಆರ್-76/2022-23, ದಿನಾಂಕ:26.05.2022.

*********

**ಪ್ರಸ್ತಾವನೆ:-**

ಮೇಲೆ ಓದಲಾದ (1) ರಲ್ಲಿ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮವು ಅನುಷ್ಠಾನಗೊಳಿಸುತ್ತಿರುವ ಅರಿವು ಶೈಕ್ಷಣಿಕ ಸಾಲ ಯೋಜನೆಯಡಿ ಇಂಜಿನಿಯರಿಂಗ್, ವೈದ್ಯಕೀಯ, ದಂತವೈದ್ಯಕೀಯ ಇತ್ಯಾದಿ ವೃತ್ತಿಪರ ಉನ್ನತ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುವ ಹಿಂದುಳಿದ ವರ್ಗಗಳ ಎಲ್ಲಾ ಪ್ರವರ್ಗಗಳ ವಿದ್ಯಾರ್ಥಿಗಳಿಗೆ ಅರಿವು ಶೈಕ್ಷಣಿಕ ಸಾಲ ಯೋಜನೆಯ ಪರಿಷ್ಕೃತ ಮಾರ್ಗಸೂಚಿಗಳನ್ನು ಅನುಸರಿಸುವ ಷರತ್ತಿಗೊಳಪಟ್ಟು ವಾರ್ಷಿಕ ಶೇ.2 ರ ಬಡ್ಡಿ ದರದಲ್ಲಿ ಗರಿಷ್ಠ ರೂ.1.00 ಲಕ್ಷ ಅಥವಾ ವಾಸ್ತವಿಕ ವೆಚ್ಚಕ್ಕೆ ಅನುಗುಣವಾಗಿ ಸಾಲವನ್ನು ಮಂಜೂರು ಮಾಡಲು ಅನುಮೋದನೆ ನೀಡಿ ಆದೇಶಿಸಿದೆ.

ಮೇಲೆ ಓದಲಾದ (2) ರ ಪ್ರಸ್ತಾವನೆಯಲ್ಲಿ ಅರಿವು ಶೈಕ್ಷಣಿಕ ಸಾಲ ಯೋಜನೆಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿಯಲ್ಲಿನ ಇತರೆ ನಿಗಮಗಳಲ್ಲಿರುವಂತೆ ಸಾಮಾನ್ಯ ಮಾರ್ಗಸೂಚಿಯ ಪ್ರಕಾರ ಯೋಜನೆ ಅನುಷ್ಠಾನಕ್ಕೆ ಕ್ರಮವಹಿಸಲು ಕರ್ನಾಟಕ ಮರಾಠ ಅಭಿವೃದ್ಧಿ ನಿಗಮ ನಿಗಮದ 04 ನೇ ನಿರ್ದೇಶಕ ಮಂಡಳಿಯ ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಿದ್ದು, ಅದರಂತೆ ಈ ಕೆಳಕಂಡ ವೃತ್ತಿಪರ ಉನ್ನತ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುವ ಮರಾಠಾ ಸಮುದಾಯದ ಫಲಾನುಭವಿಗಳಿಗೆ ಸಾಲ ಮಂಜೂರಾತಿ ಮಾಡಲು ಸದರಿ ಯೋಜನೆಯ ಮಾರ್ಗಸೂಚಿಗಳಿಗೆ ಅನುಮೋದನೆ ನೀಡುವಂತೆ ಕೋರಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಮರಾಠ ಅಭಿವೃದ್ಧಿ ನಿಗಮ ನಿಯಮಿತ ಇವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

- **ಸ್ನಾತಕ ಪದವಿ (Under Graduation) :**

ಇಂಜಿನಿಯರಿಂಗ್, ವೈದ್ಯಕೀಯ, ದಂತವೈದ್ಯಕೀಯ, ಆಯುಷ್ (ಆಯುರ್ವೇದ, ಹೋಮಿಯೋಪತಿ, ಯುನಾನಿ), ಆರ್ಕಿಟೆಕ್ಚರ್, ಕೃಷಿ ವಿಜ್ಞಾನ ಕೋರ್ಸ್‌ಗಳು: ಬಿ.ಎಸ್‌ಸಿ. (ಕೃಷಿ), ಬಿ.ಎಸ್‌ಸಿ. (ಫಾರೆಸ್ಟ್ರಿ), ಬಿ.ಎಸ್‌ಸಿ. (ಸಿರಿಕಲ್ಚರ್) ಬಿ.ಎಸ್‌ಸಿ. (ಅಗ್ರಿ ಬಯೋಟೆಕ್), ಬಿ.ಎಸ್‌ಸಿ. (ತೋಟಗಾರಿಕೆ), 4 ವರ್ಷದ ಬಿ.ಎಸ್‌ಸಿ (ಹಾನರ್ಸ್), ಬಿ.ಎಸ್‌ಸಿ (ನರ್ಸಿಂಗ್), ಬಿಪಿಟಿ, ಬಿಪಿಓ, ಅಲೈಟ್ ಹೆಲ್ತ್ ಸೈನ್ಸ್, ಬಿ.ಹೆಚ್.ಎಸ್‌ಸಿ. (ಗೃಹ ವಿಜ್ಞಾನ), ಬಿ.ಟೆಕ್ (ಫುಡ್ ಟೆಕ್ನಾಲಜಿ), ಬಿ.ಟೆಕ್ (ಡೈರಿ ಟೆಕ್ನಾಲಜಿ) ಬಿ.ಎಫ್.ಎಸ್‌ಸಿ. (ಫಿಶರಿ ಸೈನ್ಸ್), ಬಿ.ಟೆಕ್ (ಫುಡ್ ಸೈನ್ಸ್ ಅಂಡ್ ಟೆಕ್ನಾಲಜಿ) ಬಿ.ಎಸ್‌ಸಿ (ಅಗ್ರಿಮಾರ್ಕೆಟಿಂಗ್ ಮತ್ತು ಕೋಆಪರೇಶನ್), ಬಿ.ಟೆಕ್ (ಅಗ್ರಿಕಲ್ಚರ್ ಇಂಜಿನಿಯರಿಂಗ್), ಪಶು ವೈದ್ಯಕೀಯ ಮತ್ತು ಪಶುಸಂಗೋಪನೆ (ಬಿ.ವಿ.ಎಸ್‌ಸಿ & ಎ.ಹೆಚ್), ಬಿ-ಫಾರ್ಮ 2ನೇ ವರ್ಷದ ಬಿ-ಫಾರ್ಮ, ಫಾರ್ಮ-ಡಿ.

...2

- **ಸ್ನಾತಕೋತ್ತರ ಪದವಿ (Post Graduation):**

ಎಂ.ಬಿ.ಎ, ಎಂ.ಸಿ.ಎ, ಎಂ.ಆರ್ಕಿಟೆಕ್ಚರ್, ಎಂ.ಟೆಕ್, ಎಂ.ಇ, ಎಂ.ಡಿಇಎಸ್, ಎಂ.ಡಿ, ಎಂ.ಎಸ್ (ಮಾಸ್ಟರ್ ಆಫ್ ಸರ್ಜರಿ), ಪಿ.ಜಿ ಡಿಪ್ಲೋಮಾ, ಎಂ.ಎಸ್.ಸಿ (ನರ್ಸಿಂಗ್), ಎಂ.ಎಸ್.ಸಿ (ಅಲೈಡ್ ಹೆಲ್ತ್ ಸೈನ್ಸ್), ಎಂ.ಎಸ್.ಸಿ ಎಂ.ಪಿ.ಟಿ, ಎಂ.ಫಾರ್ಮ, ಎಂ.ಫಾರ್ಮಡಿ

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಬಿಸಿಡಬ್ಲ್ಯೂ 484 ಬಿಎಂಎಸ್ 2022,**
**ಬೆಂಗಳೂರು, ದಿನಾಂಕ:29-09-2022**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮದಿಂದ ಅರಿವು ಶೈಕ್ಷಣಿಕ ಸಾಲ ಯೋಜನೆಯನ್ನು ಈ ಕೆಳಕಂಡ ಮಾರ್ಗಸೂಚಿಗಳನ್ವಯ ಷರತ್ತಿಗೊಳಪಟ್ಟು ಅನುಷ್ಠಾನಗೊಳಿಸಲು ಮಂಜೂರಾತಿ ನೀಡಿ ಆದೇಶಿಸಿದೆ.

**ಅರಿವು-ಶೈಕ್ಷಣಿಕ ಸಾಲ ಯೋಜನೆಯ ಮಾರ್ಗಸೂಚಿಗಳು**
**ಮತ್ತು ಅನುಷ್ಠಾನದಲ್ಲಿ ಅನುಸರಿಸಬೇಕಾದ ವಿಧಾನಗಳು**

**I. ಅರ್ಹತೆ.**

1. ನಿಗಮದ ಯೋಜನೆಗಳಲ್ಲಿ ಆರ್ಥಿಕ ಸಹಾಯ ಪಡೆಯಲು ಅಭ್ಯರ್ಥಿಯು ದಿನಾಂಕ:30.03.2022 ರ ಸಂಖ್ಯೆ:ಸಕಇ 225 ಬಿಸಿಎ 2000 ಸರ್ಕಾರದ ಆದೇಶದಲ್ಲಿ ಗುರ್ತಿಸಿದ ಪ್ರವರ್ಗ 3-ಬಿ ಅಡಿಯಲ್ಲಿ 2(ಎ) ರಿಂದ 2(ಎಫ್) ವರೆಗೆ ಬರುವ (ಎ) ಮರಾತ, ಮರಾಠ, (ಬಿ) ಅರೆಕ್ಷತ್ರಿಯ, ಅರೆ ಮರಾಠ, ಆರ್ಯ ಮರಾಠ (ಸಿ) ಆರ್ಯ, ಆರ್ಯರು (ಡಿ) ಕೊಂಕಣ ಮರಾಠ (ಇ) ಕ್ಷತ್ರಿಯ ಮರಾತ/ಕ್ಷತ್ರಿಯ ಮರಾಠ (ಎಫ್) ಕುಳವಾಡಿ ಜಾತಿಗಳಿಗೆ ಸೇರಿದವರಾಗಿರಬೇಕು.
2. ವಿದ್ಯಾರ್ಥಿ ಮತ್ತು ಅವರ ಕುಟುಂಬದ ವಾರ್ಷಿಕ ವರಮಾನವು ಎಲ್ಲಾ ಮೂಲಗಳಿಂದ ರೂ.3.50 ಲಕ್ಷಗಳನ್ನು ಮೀರಿರಬಾರದು.
3. ವಿದ್ಯಾರ್ಥಿಯು ಸರ್ಕಾರಿ ಕಾಲೇಜು/ಮಾನ್ಯತೆ ಪಡೆದ ಅನುದಾನಿತ ಮತ್ತು ಅನುದಾನ ರಹಿತ, ಖಾಸಗಿ ಕಾಲೇಜುಗಳಲ್ಲಿ ವೃತ್ತಿಪರ/ತಾಂತ್ರಿಕ/ಉನ್ನತ ವ್ಯಾಸಂಗದ ಕೋರ್ಸ್‌ಗಳಲ್ಲಿ ಸಿ.ಇ.ಟಿ ಮೂಲಕ ಪ್ರವೇಶ ಪಡೆದು ವ್ಯಾಸಂಗ ಮಾಡುತ್ತಿರಬೇಕು.
4. ವಿದ್ಯಾರ್ಥಿಯು ಶೈಕ್ಷಣಿಕ ಉದ್ದೇಶಕ್ಕೆ ಇತರೆ ಯಾವುದೇ ಬ್ಯಾಂಕ್/ಆರ್ಥಿಕ ಸಂಸ್ಥೆ/ಇಲಾಖೆಗಳಿಂದ ಸಾಲ ಪಡೆದಿರಬಾರದು.

ವಯೋಮಿತಿ,

1. ಸ್ನಾತಕ ((Under Graduation)) 18 ರಿಂದ 21 ವರ್ಷ.
2. ಸ್ನಾತಕೋತ್ತರ (Post Graduation) 21 ರಿಂದ 30 ವರ್ಷ.

**II. ಸಾಲದ ಉದ್ದೇಶ ಮತ್ತು ಬಡ್ಡಿದರ:**

ಈ ಮುಂದಿನ ವೆಚ್ಚಗಳಿಗೆ ಒಳಪಟ್ಟು ವಾರ್ಷಿಕ ಗರಿಷ್ಠ ರೂ.1,00,000/-ಗಳನ್ನು ಅಥವಾ ಉನ್ನತ ವ್ಯಾಸಂಗದ ವಾಸ್ತವಿಕ ಕೋರ್ಸ್ ವೆಚ್ಚದ **(Actual Fee)** ಮಿತಿಗೊಳಪಟ್ಟು ಸಾಲವನ್ನು ವಾರ್ಷಿಕ ಶೇ.2ರ ಬಡ್ಡಿ ದರದಲ್ಲಿ ಮಂಜೂರು ಮಾಡಲಾಗುವುದು.

1. ಪ್ರವೇಶ ಶುಲ್ಕ, ಭೋದನಾ ವೆಚ್ಚ, ಲ್ಯಾಬೋರೇಟರಿ ಫೀ, ಪರೀಕ್ಷಾ ಶುಲ್ಕ ಹಾಗೂ ಸರ್ಕಾರವು ನಿಗದಿಪಡಿಸಿದ ಇತ್ಯಾದಿ ಫೀಜುಗಳು. (ಕಾಲೇಜ್ ಪ್ರಿನ್ಸಿಪಾಲರಿಂದ Fee Structure ಪ್ರತಿಯನ್ನು ಪಡೆದು ವಿದ್ಯಾರ್ಥಿಯು ಸಲ್ಲಿಸಬೇಕು.)

29/09/22 .....3